**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**
**ಚಳ್ಳಕೆರೆ.**

**ಸಿ.ಸಿ.ನಂ.471/2016**

| | | |
|---|---|---|
| **ಪಿರ್ಯಾದಿಃ** | **ಃವಿರುದ್ಧಃ** | **ಆರೋಪಿ** |
| **ಸರ್ಕಾರದ ಪರವಾಗಿ ಚಳ್ಳಕೆರೆ ಪೋಲೀಸ್** | | **ಸೋಮನಾಥ ಬಾಬು** |

**ದೋಷಾರೋಪಣೆ**

ಶ್ರೀ ಸುಶಾಂತ ಮಹಾವೀರ ಚೌಗಲೆ, ಪ್ರ.ದ.ನ್ಯಾ.ದಂಡಾಧಿಕಾರಿಗಳು ಚಳ್ಳಕೆರೆ ಆದ ನಾನು

**ಆರೋಪಿತರಾದ –** **ಸೋಮನಾಥ ಬಾಬು ಯಾನೆ ಶೆಟ್ಟಿಸೋಮನಾಥ, ಬಿನ್ ರಾಮದಾಸ್ ಎಂ.ಜೆ., ವಯಸ್ಸುಃ 36 ವರ್ಷ, ವ್ಯಾಪಾರಿ, ವಾಸಃ 19ನೇ ವಾರ್ಡ್, ವಿಠಲ್‌ನಗರ, ಚಳ್ಳಕೆರೆ ಟೌನ್, ಚಿತ್ರದುರ್ಗ ಜಿಲ್ಲೆ.**

ಆದ ನಿಮ್ಮ ವಿರುದ್ದ ಈ ಕೆಳಕಂಡ ಆರೋಪಣೆಗೆ ಗುರಿಪಡಿಸುತ್ತೇನೆ.

ದಿನಾಂಕಃ 15.07.2015 ರಂದು ಬೆಳಿಗ್ಗೆ 9.15 ಗಂಟೆ ಸಮಯದಲ್ಲಿ ಆರೋಪಿಯಾದ ನೀನು ನಿನ್ನ ಮನೆಯಲ್ಲಿ ಮೀಟರ್ ಬಡಿ ವ್ಯವಹಾರವನ್ನು ನಡೆಸುತ್ತಿದ್ದೀಯ ಎಂಬ ಮಾಹಿತಿ ಬಂದ ಮೇರೆಗೆ ಚಾಸಾ.1 ರವರು ಪಂಚರಾದ ಚಾಸಾ.2 ಮತ್ತು 3 ಹಾಗೂ ಸಿಬ್ಬಂದಿಯವರಾದ ಚಾಸಾ.8 ರಿಂದ 12 ರವರೊಂದಿಗೆ ನಿನ್ನ ಮನೆಯಲ್ಲಿ ಶೋಧನೆ ಮಾಡಲಾಗಿ, ನೀನು ಸಾರ್ವಜನಿಕರಿಗೆ ಮಿತಿಮೀರಿದ ಬಡ್ಡಿಗೆ ಹಣವನ್ನು ಸಾಲವಾಗಿ ನೀಡುತ್ತಾ ಹಾಗೂ ನೀಡಿದ ಸಾಲಕ್ಕೆ ಬದಲಾಗಿ ಸಾರ್ವಜನಿಕರಿಂದ ಚೆಕ್ ಹಾಗೂ ಪ್ರಾಂಸರಿ ಪತ್ರಗಳನ್ನು ಪಡೆದುಕೊಂಡು ಮೀಟರ್‌ಬಡ್ಡಿ ವ್ಯವಹಾರ ನಡೆಸುತ್ತಿದ್ದ ಬಗ್ಗೆ ಸದರಿ ಚಾಸಾ.1 ರವರು ನಿನ್ನ ಮನೆಯಿಂದ ದಾಖಲಾತಿಗಳನ್ನು ಪಡೆದು ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ. ಆದ್ದರಿಂದ ಆರೋಪಿಯಾದ ನೀನು ಕರ್ನಾಟಕ ಮೊನಿಲೆಂಡರ್ ಕಾಯ್ದೆ 1961ರ ಕಲಂ 38 ಹಾಗೂ 39 ರಡಿಯಲ್ಲಿ ಹಾಗೂ ಕರ್ನಾಟಕ ಪ್ರಾಹಿಂಭಿಷನ್ ಆಫ್ ಚಾರ್ಜಿಂಗ್ ಎಕ್ಸಾರ್ಬಿಟೆಂಟ್ ಇಂಟ್ರಸ್ಟ್ ಕಾಯ್ದೆ 2004ರ ಕಲಂ 4 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀಯ.

(ಮೇಲ್ಕಂಡ ಆರೋಪಣೆಗಳನ್ನು ಆರೋಪಿಯಾದ ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವುದರಿಂದ ವಿಚಾರಣೆಗೆ ಗುರಿಯಾಗಬೇಕು ಎಂದು ನಿರ್ದೇಶಿಸಿರುತ್ತೇನೆ.)

ದಿನಾಂಕಃ 21.11.2017.
ಸ್ಥಳಃ ಚಳ್ಳಕೆರೆ

(ಸುಶಾಂತ ಮಹಾವೀರ ಚೌಗಲೆ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಚಳ್ಳಕೆರೆ.

## ಆರೋಪಿಯ ಹೇಳಿಕೆ

ಪ್ರಶ್ನೆ.1- ನಿಮಗೆ ಓದಿ ಹೇಳಿದ ಆಪಾದನೆಗಳು ತಿಳಿಯಿತೇ?

ಉತ್ತರ-ಃ-

ಪ್ರಶ್ನೆಃ2- ನೀವು ಆಪಾದನೆಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರ-ಃ-

(ತೆರೆದ ನ್ಯಾಯಾಲಯದಲ್ಲಿ ಮೇಲ್ಕಂಡಂತೆ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಕೇಳಲಾಗಿ ಆರೋಪಿಗಳು ಅರ್ಥೈಸಿಕೊಂಡು ನುಡಿದ ಪೂರ್ಣವಾದ ಹೇಳಿಕೆಗಳನ್ನು ಈ ಬರಹವು ಒಳಗೊಂಡಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕಃ 21.11.2017.
ಸ್ಥಳಃ ಚಳ್ಳಕೆರೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಚಳ್ಳಕೆರೆ.